**ದಿನಾಂಕಃ 15.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನನ್ನ ಮಗನಿಗೆ ಈಗ 17 ವರ್ಷ ವಯಸ್ಸು. ನನ್ನ ಮಗನಿಗೆ ಚಾಲನಾ ಪರವಾನಗಿ ಇಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಆ ದಿನ ನನ್ನ ಮಗ ಜಯನಗರದ 9ನೇ ಬ್ಲಾಕ್ ನಿಂದ ಟಿ ಬ್ಲಾಕ್ ಗೆ ಹೋಗುತ್ತಿದ್ದನು. ನನ್ನ ಮಗ ದಿನನಿತ್ಯ ದ್ವಿಚಕ್ರ ವಾಹನದಲ್ಲಿ ಹೋಗುವುದಿಲ್ಲ, ಆದರೆ ಆ ದಿನ ಮಾತ್ರ ಹೋಗುತ್ತಿದ್ದನು. ನನ್ನ ಮಗ ಹೆಲ್ಮೆಟ್ ಧರಿಸಿದ್ದನೋ, ಇಲ್ಲವೋ ನನಗೆ ಗೊತ್ತಿಲ್ಲ. ಮುಖ್ಯ ರಸ್ತೆಯಲ್ಲಿ ಸಿಸಿ ಕ್ಯಾಮರಾ ಇರುವ ವಿಚಾರ ತಿಳಿದಿದೆ. ಅದರಲ್ಲಿ ಅಪಘಾತ ಆಗಿರುವುದು ರೆಕಾರ್ಡ್ ಆಗಿರುತ್ತದೆ ಎಂದರೆ ಸರಿ. ನನ್ನ ಮಗ ಹೋಗುತ್ತಿದ್ದ ವಾಹನದ ಮುಂಭಾಗ ಜಖಂ ಆಗಿರುತ್ತದೆ. ಆಪಾದಿತ ಕಾರಿನ ಮುಂಭಾಗದ ಎಡಭಾಗಕ್ಕೆ ಜಖಂ ಆಗಿರುತ್ತದೆ. ನನ್ನ ಮಗ ಹೋಗುತ್ತಿದ್ದ ವಾಹನ ಆಪಾದಿತ ಕಾರಿಗೆ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿಯಲ್ಲ. ಮುಖ ರಸ್ತೆಯ ಜಂಕ್ಷನ್ ನಲ್ಲಿ ರಸ್ತೆ ಉಬ್ಬು ಇದೆ ಎಂದರೆ ಸರಿಯಲ್ಲ. ಸದರಿ ಜಂಕ್ಷನ್ ನಲ್ಲಿ ಎಲ್ಲಾ ವಾಹನಗಳು ನಿಧಾನಗತಿಯಲ್ಲಿ ಚಲಿಸುತ್ತವೆ ಎಂದರೆ ಸರಿಯಲ್ಲ. ಆಪಾದಿತ ಕಾರಿನ ಚಾಲಕನ ತಪ್ಪಿ ನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ ತಪ್ಪಿ ನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

ನನ್ನ ಮಗ ಒಂದೂವರೆ ತಿಂಗಳಿನಿಂದ ಕಾಲೇಜಿಗೆ ಹೋಗುತ್ತಿದ್ದಾನೆ. ನನ್ನ ಮಗ ನಡೆಯುತ್ತಾನೆ ಎಂದರೆ ಸಾಕ್ಷಿಯು ಕೋಲಿನ ಸಹಾಯದಿಂದ ನಡೆಯುತ್ತಾನೆ ಎಂದು ನುಡಿಯುತ್ತಾರೆ. ನಾನು ಹೇಳಿರುವಷ್ಟು ಚಿಕಿತ್ಸೆಗೆ ಖರ್ಚು ಆಗಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯ ಖರ್ಚು ವಿಮೆಯ ಮೂಲಕ ಮರುಪಾವತಿ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಉಂಟಾದ ಗಾಯಗಳು ಈಗ ವಾಸಿಯಾಗಿದ್ದು, ಯಾವುದೇ ನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ.

2ನೇ ಎದುರುದಾರರ ಪರ ಮಾನ್ಯ ವಕೀಲರು ಪ್ರತಿವಾದ ಪತ್ರ ಸಲ್ಲಿಸದಿರುವುದರಿಂದ ಪಾಟೀ ಸವಾಲನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

3ನೇ ಎದುರುದಾರರ ಪರ ಮಾನ್ಯ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**